

ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮಾನ್ಯ ಎನ್ನುವಂತಾಗಿರುವ ಲಿಂಗ ತಾರತಮ್ಯದ ಕುರಿತ ಚರ್ಚೆಗಳ ಸಂದರ್ಭದಲ್ಲಿ, ಶಿಕ್ಷಣವನ್ನು ಅರಿವು ಮತ್ತು ವಿಮೋಚನೆಯ ರೂಪದಲ್ಲಿ ನೋಡಲಾಗುತ್ತದೆ. ಹಾಗಾದರೆ, ಉನ್ನತ ಶಿಕ್ಷಣದ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುವ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳು ಲಿಂಗ ತಾರತಮ್ಯದಿಂದ ಮುಕ್ತವಾಗಿಯೆ? ಪರಿಸ್ಥಿತಿ ಆಶಾದಾಯಕವಾಗಿಯೇನೂ ಇಲ್ಲ. ಬಾಹ್ಯಾಕಾಶ ಯಾನದ ದೊಡ್ಡಣ್ಣ 'ನಾಸಾ'ದಂಥ ಸಂಸ್ಥೆಗಳು ಕೂಡ ಮಹಿಳೆಯರ ಬಗೆಗಿನ ಪೂರ್ವಗ್ರಹಗಳಿಂದ ಹೊರತಾಗಿಲ್ಲ. ವಿಜ್ಞಾನ–ತಂತ್ರಜ್ಞಾನದ ಉನ್ನತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳು ಲಭ್ಯವಾಗಿಲ್ಲ. ಪುರುಷರಷ್ಟೇ ಸಮರ್ಥರಾಗಿದ್ದರೂ, ಕ್ಷುಲ್ಲಕ ಕಾರಣಗಳನ್ನು ನೀಡಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನಿರಾಕರಿಸುವ ಪ್ರವೃತ್ತಿ ವಿಶ್ವದೆಲ್ಲೆಡೆ ಇದೆ. ಬಾಹ್ಯಾಕಾಶ ಯಾನವೂ ಸೇರಿದಂತೆ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮಹಿಳೆಯರನ್ನು ಕಡೆಗಣಿಸುತ್ತಿರುವ ಕುರಿತು ಬೆಳಕು ಚೆಲ್ಲುವ ಈ ವಿಶ್ಲೇಷಣೆ, ಸಾಮಾಜಿಕ ತರತಮಗಳ ಆಳ ಬೇರುಗಳ ಕುರಿತು ಸಹೃದಯರ ಗಮನಸೆಳೆಯುತ್ತದೆ. ಅಂದಹಾಗೆ, ಫೆಬ್ರುವರಿ 8 'ವಿಜ್ಞಾನದಲ್ಲಿ ಮಹಿಳೆಯರು ಮತ್ತು ಬಾಲಕಿಯರ ಅಂತರರಾಷ್ಟ್ರೀಯ ದಿನ'.